# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಮುಖ್ಯ ಆಯುಕ್ತರು ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002.**

ಸಂಖ್ಯೆ: ಮುಆ/ಪಿಆರ್/191/23-24 ದಿನಾಂಕ: 18/10/24.

**ಅಧಿಕಾರ ಪ್ರತ್ಯಾಯೋಜನಾ ಆದೇಶ**

(ಬಿಬಿಎಂಪಿ ಕಾಯ್ದೆ-2020 ರ ಕಲಂ 66 & 67 ರಡಿಯಲ್ಲಿ)

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಕ್ಷೆ ಮಂಜೂರಾತಿ ಉಲ್ಲಂಘಿಸಿ / ಅನಧಿಕೃತವಾಗಿ ನಕ್ಷೆ ಮಂಜೂರತಿ ಪಡೆಯದೇ /ನಿರ್ಮಿಸುತ್ತಿರುವ ಕಟ್ಟಡಗಳನ್ನು ತೆರವುಗೊಳಿಸಲು ಅಧಿಕಾರ ಪ್ರತ್ಯಾಯೋಜನೆ ಮಾಡುವ ಬಗ್ಗೆ.

ಉಲ್ಲೇಖ:
1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ 66 & 67
2) ಕಛೇರ ಆದೇಶ ಸಂಖ್ಯೆ: ಮುಆ/101/2023-24, ದಿನಾಂಕ: 27.07.2023
3) ಅಧಿಕಾರ ಪ್ರತ್ಯಾಯೋ ಆದೇಶ ಸಂಖ್ಯೆ: ಮುಆ/108/2022, ದಿನಾಂಕ: 07.08.2023
4) ಕಛೇರಿ ಆದೇಶ ಸಂಖ್ಯೆ: ಮುಆ/ (G) 2072 /2024-25 ದಿನಾಂಕ: 18.10.2024

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಂಜೂರಾತಿ ನಕ್ಷೆಗಳ ಉಲ್ಲಂಘನೆ, ಅನಧಿಕೃತ ಕಟ್ಟಡಗಳ ನಿರ್ಮಾಣಗಳ ತಡೆಗೆ ಸಂಬಂಧಪಟ್ಟಂತೆ ಕಾರ್ಯ ವಿಧಾನಗಳನ್ನು ವಿವರಿಸಿ ವಿವಿಧ ರೀತಿಯ ಉಲ್ಲಂಘನೆಗಳನ್ನು ತಡೆಯುವಲ್ಲಿ ಮತ್ತು ಕಟ್ಟಡಗಳನ್ನು ತೆರವುಗೊಳಿಸುವಲ್ಲಿ ಪಾಲಿಕೆಯ ವಿವಿಧ ಶಾಖೆಯ ಅಧಿಕಾರಿಗಳನ್ನೊಳಗೊಂಡ ಕಾರ್ಯಪಡೆಯನ್ನು ರಚಿಸಿ ಅನಧಿಕೃತ/ಉಲ್ಲಂಘನೆ ತಡೆಯಲು ಕಾರ್ಯ ವಿಧಾನವನ್ನು ವಿವರಿಸಿ ಉಲ್ಲೇಖ (2) ರಲ್ಲಿ ಕಛೇರಿ ಆದೇಶವನ್ನು ಹೊರಡಿಸಲಾಗಿರುತ್ತದೆ.

ಈ ಕಛೇರಿ ಆದೇಶವನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ಉಲ್ಲೇಖ (3) ರ ಅಧಿಕಾರ ಪ್ರತ್ಯಾಯೋಜನಾ ಆದೇಶದಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತ / ಉಲ್ಲಂಘಿತ ಕಟ್ಟಡಗಳ ನಿರ್ಮಾಣಗಳ ತಡೆಗೆ ಸಂಬಂಧಪಟ್ಟಂತೆ ವಿವಿಧ ಅಧಿಕಾರಿಗಳಿಗೆ ಬೃ.ಬೆ.ಮ.ಪಾ ಕಾಯ್ದೆ 2020 ರ ಕಲಂ 66 & 67 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಲಂ 356 ರಡಿಯಲ್ಲಿ ಕಾರ್ಯವನ್ನು ನಿರ್ವಹಿಸಲು ಅಧಿಕಾರ ಪ್ರತ್ಯಾಯೋಜನೆ ಮಾಡಿ ಆದೇಶ ಹೊರಡಿಸಲಾಗಿತ್ತು.

ತದನಂತರ ಉಲ್ಲೇಖ (4)ರ ಆದೇಶದಲ್ಲಿ ವಿವಿಧ ರೀತಿಯ ಉಲ್ಲಂಘನೆಗಳನ್ನು ತಡೆಯುವಲ್ಲಿ ಮತ್ತು ಕಟ್ಟಡಗಳನ್ನು ತೆರವುಗೊಳಿಸುವಲ್ಲಿ ಪಾಲಿಕೆಯ ವಿವಿಧ ಶಾಖೆಯ ಅಧಿಕಾರಿಗಳನ್ನೊಳಗೊಂಡ ಅನಧಿಕೃತ/ ಉಲ್ಲಂಘನೆ ತಡೆಯಲು ಕಾರ್ಯ ವಿಧಾನವನ್ನು ವಿವರಿಸಿ ಆದೇಶ ಹೊರಡಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಉಲ್ಲೇಖ (3)ರಲ್ಲಿ ಹೊರಡಿಸಲಾಗಿರುವ ಆದೇಶವನ್ನು ಉಲ್ಲೇಖ (4)ರ ಆದೇಶಕ್ಕನುಗುಣವಾಗಿ ಮಾರ್ಪಾಡಿಸುವ ಅವಶ್ಯಕತೆ ಇರುತ್ತದೆ. ಆದ್ದರಿಂದ ಉಲ್ಲೇಖ (3)ರ ಅಧಿಕಾರ ಪ್ರತ್ಯಾಯೋಜನೆ ಆದೇಶವನ್ನು ಹಿಂಪಡೆದು ಬೃ.ಬೆ.ಮ.ಪಾ ಕಾಯ್ದೆ 2020 ರ ಕಲಂ 66 & 67 ರಡಿ ಪ್ರದತ್ತವಾದ ಅಧಿಕಾರದಂತೆ ವಿವಿಧ ರೀತಿಯ ಉಲ್ಲಂಘನೆಗಳನ್ನು ತಡೆಯುವಲ್ಲಿ ಮತ್ತು ಕಟ್ಟಡಗಳನ್ನು ತೆರವುಗೊಳಿಸುವಲ್ಲಿ ವಲಯ ಆಯುಕ್ತರು ರವರುಗಳಿಗೆ ಬೃ.ಬೆ.ಮ.ಪಾ ಕಾಯ್ದೆ 2020 ರ ಕಲಂ 356 ರಡಿಯಲ್ಲಿ ಕ್ರಮ ವಹಿಸಲು ಅಧಿಕಾರ ಪ್ರತ್ಯಾಯೋಜನೆ ನೀಡಿ ಆದೇಶ ಹೊರಡಿಸಲಾಗಿದೆ. ಈ ಅಧಿಕಾರ ಪ್ರತ್ಯಾಯೋಜನೆಯಂತೆ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲು ಆದೇಶಿಸಿದೆ.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2. ವಿಶೇಷ ಆಯುಕ್ತರು (ಯೋಜನೆ) /ಆಡಳಿತ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ವಲಯಗಳ ಆಯುಕ್ತರು (ಪೂರ್ವ ವಲಯ/ಪಶ್ಚಿಮ ವಲಯ /ದಕ್ಷಿಣ ವಲಯ /ಮಹದೇವಪುರ ವಲಯ /ಯಲಹಂಕ ವಲಯ /ದಾಸರಹಳ್ಳಿ ವಲಯ /ರಾಜರಾಜೇಶ್ವರಿನಗರ ವಲಯ / ಬೊಮ್ಮನಹಳ್ಳಿ ವಲಯ) ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಪ್ರಧಾನ ಅಭಿಯಂತರರು, ಬಿಬಿಎಂಪಿ ರವರ ಮಾಹಿತಿಗಾಗಿ.
5. ಮುಖ್ಯ ನಗರ ಯೋಜಕರು, ಬಿಬಿಎಂಪಿ ರವರ ಮಾಹಿತಿಗಾಗಿ
6. ಜಂಟಿ ಆಯುಕ್ತರು (ಪೂರ್ವ ವಲಯ/ಪಶ್ಚಿಮ ವಲಯ /ದಕ್ಷಿಣ ವಲಯ /ಮಹದೇವಪುರ ವಲಯ / ಯಲಹಂಕ ವಲಯ /ದಾಸರಹಳ್ಳಿ ವಲಯ /ರಾಜರಾಜೇಶ್ವರಿನಗರ ವಲಯ /ಬೊಮ್ಮನಹಳ್ಳಿ ವಲಯ) ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಉಪ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ.
8. ವಿಭಾಗದ ಎಲ್ಲಾ ಕಾರ್ಯಪಾಲಕ ಅಭಿಯಂತರರು ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ
9. ಉಪ ವಿಭಾಗದ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರ ಅಗತ್ಯ ಕ್ರಮಕ್ಕಾಗಿ
10. ಕಚೇರಿ ಪ್ರತಿ